ಅ) ಈವರೆವಿಗೆ ಸಕ್ರಮ ಮಾಡಿರುವ ನೀರಾವರಿ ಪಂಪ್‌ಸೆಟ್‌ಗಳೆಷ್ಟು

ಇ) ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮಾರ್ಚ್ 2002 ರ ಅಂತ್ಯದಲ್ಲಿದ್ದಂತೆ ರಾಜ್ಯದಲ್ಲಿ ಗುರುತಿಸಲಾಗಿದ್ದ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು.

ಆ) ಮೇ 2002 ರವರೆಗೆ ರಾಜ್ಯದಲ್ಲಿ ಸಕ್ರಮಗೊಳಿಸಿದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ 77,828.

ಇ) ರೈತರು ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು 1997 ರಿಂದ ಆಗಿಂದಾಗ್ಗೆ ಅವಕಾಶ ನೀಡುತ್ತಾ ಬಂದಿವೆ.

ವಿದ್ಯುತ್ ಕಳವು ವಿರೋಧಿ ಕಾನೂನು ದಿನಾಂಕ: 10.4.2002 ರಿಂದ ಜಾರಿಗೊಂಡರೂ ಸಹ ದಿನಾಂಕ: 30.6.2002 ರವರೆಗೆ ಅಂತಿಮವಾಗಿ ಐ.ಪಿ. ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ಅವಕಾಶ ನೀಡಲಾಯಿತು. ನಂತರ ಯಾವುದೇ ಯೋಜನೆಯೂ ಸಕ್ರಮವಾಗಿ ಜಾಲ್ತಿಯಿರುವುದಿಲ್ಲ.

ಮಂಡ್ಯ ನಗರ ಮಾಂಸಹಾರಿ ಹೋಟೆಲ್‌ಗಳಲ್ಲಿ ಅನಧಿಕೃತ ಮದ್ಯ ಸರಬರಾಜು

9[illegible] (1330) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಮಾಂಸಾಹಾರಿ ಹೋಟೆಲ್‌ಗಳಲ್ಲಿ ಅನಧಿಕೃತವಾಗಿ ಮಾದಕ ಪಾನೀಯ (ಮದ್ಯ) ಸರಬರಾಜು ಮಾಡಲಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ?

ಆ) ಈ ವಿಚಾರವನ್ನು ಇಲಾಖೆಯು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕಾರಣವೇನು?

ಇ) ನಿರ್ಲಕ್ಷ್ಯ ಮನೋಭಾವನೆಯ ಅಧಿಕಾರಿಗಳ ಮೇಲೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಹೌದು.

ಆ) ಅಬಕಾರಿ ಇಲಾಖೆಯು ಅಕ್ರಮ ಮದ್ಯ ಹೊಂದಿರುವ ಮಾಂಸಾಹಾರಿ ಹೋಟೆಲ್‌ಗಳ ವಿರುದ್ಧ ಕ್ರಮ ಜರುಗಿಸಿ 2001-02ನೇ ಸಾಲಿಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 27 ಮೊಕದ್ದಮೆಗಳನ್ನು ಹಾಗೂ ಮಂಡ್ಯ ನಗರದಲ್ಲಿ ಒಂದು ಮೊಕದ್ದಮೆಯನ್ನು ದಾಖಲಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಕೆ.ಜಿ.ಎಫ್. ಕ್ಷೇತ್ರಕ್ಕೆ ನೀರು ಸರಬರಾಜು

989 (1215) - ಶ್ರೀ ಭಕ್ತವತ್ಸಲಂ ಎಂ. (ಕೆ.ಜಿ.ಎಫ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ಹಾಗೂ ರಾಜ್ಯದಲ್ಲಿ ನೀರು ಸರಬರಾಜನ್ನು ಉತ್ತಮಗೊಳಿಸಲು ಸರ್ಕಾರವು ಕಳೆದ 20 ತಿಂಗಳುಗಳಲ್ಲಿ ವೆಚ್ಚ ಮಾಡಿರುವ ಮೊತ್ತ;

ಆ) ಕೆ.ಜಿ.ಎಫ್ ಕ್ಷೇತ್ರದಲ್ಲಿ ಒಟ್ಟು ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಸರ್ಕಾರವು ಕಳೆದ 20 ತಿಂಗಳುಗಳಲ್ಲಿ ನೀರು ಸರಬರಾಜನ್ನು ಉತ್ತಮಗೊಳಿಸಲು ಅಭಾವ ಪರಿಹಾರ ಹಾಗೂ ವಿಶೇಷ ಘಟಕ ಯೋಜನೆಯಡಿಯಲ್ಲಿ ವೆಚ್ಚ ಮಾಡಿರುವ ಮೊತ್ತ ಕೆಳಕಂಡಂತಿದೆ.

ಅ) ಕೆ.ಜಿ.ಎಫ್ ನಗರ ರೂ. 48.24 ಲಕ್ಷಗಳು

ಆ) ರಾಜ್ಯದಲ್ಲಿ ರೂ. 1710.00 ಲಕ್ಷಗಳು

ಆ) ಕಳೆದ 20 ತಿಂಗಳುಗಳಲ್ಲಿ ಒಟ್ಟು 31 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಕಾರವಾರ ಮತ ಕ್ಷೇತ್ರದಲ್ಲಿ ಅಗ್ನಿಶಾಮಕಠಾಣೆ (ಪ್ರಾರಂಭ)

990 (239) - ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆಯ ಅಥಣಿ ತಾಲ್ಲೂಕಿನ ಕಾಗವಾಡ ಮತ ಕ್ಷೇತ್ರದಲ್ಲಿ ಪದೇ ಪದೇ ಬೆಂಕಿ ಅನಾಹುತಗಳಿಂದ ನಷ್ಟ ಸಂಭವಿಸುತ್ತಿದ್ದು ಬೆಂಕಿ ಅನಾಹುತ ತಪ್ಪಿಸುವ ದೃಷ್ಟಿಯಿಂದ ಕಾಗವಾಡದಲ್ಲಿ ಅಥವಾ ಹೂಗಾರ ಖುರ್ದ್‌ನಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಸರ್ಕಾರದಿಂದ ಈಗಾಗಲೇ 33 ಅಗ್ನಿಶಾಮಕ ಠಾಣೆಗಳು ಮಂಜೂರಾಗಿದ್ದು ಮೂಲಭೂತ ಸೌಲಭ್ಯಗಳಲ್ಲಿದ ಕಾರಣ ಅವನ್ನು ಇನ್ನು ತೆರೆಯಲಾಗಿರುವುದಿಲ್ಲ. ಈ ಅಗ್ನಿಶಾಮಕ ಠಾಣೆಗಳನ್ನು ತೆರೆದ ನಂತರ ಕಾಗವಾಡ ಮತ ಕ್ಷೇತ್ರದಲ್ಲಿ ಅಗ್ನಿಶಾಮಕ ಠಾಣೆ ತೆರೆಯುವುದನ್ನು ಪರಿಶೀಲಿಸಲಾಗುವುದು.

ಸೇಡಂ ತಾಲ್ಲೂಕಿನ ನೆರೆಟ್ಲಾಪಾಡ್ ಕೆರೆ ಏರಿ ಬಿರುಕು ಬಿಟ್ಟಿರುವುದು

991 (831) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ತೆಲಂಗಾಣ ಆಂಧ್ರ ಗಡಿಯಂಚಿನಲ್ಲಿರುವ ಸೇಡಂ ತಾಲ್ಲೂಕಿನ ನೆರಟ್ಲಾಪಾಡ್ ಕೆರೆ ಪ್ರಾರಂಭವಾಗಿ 6-7 ವರ್ಷಗಳಾದರೂ ಸಹ ಪೂರ್ತಿಯಾಗದೇ ಇರುವ ಈ ಕೆರೆಯ ಏರಿ ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೆರೆ ದಿನಾಂಕ: 31-03-2001 ಮುಗಿಯಬೇಕಾಗಿದ್ದು ಇಲ್ಲಿಯವರೆಗೆ ಪೂರ್ತಿಗೊಳಿಸದಿರಲು ಕಾರಣವೇನು; ಈ ಕೆರೆಯ ಏರಿಯ ಮಧ್ಯಭಾಗದಲ್ಲಿ ಬಿರುಕು ಬಿಟ್ಟಿದ್ದು ಏರಿನ ರಿವಿಟ್‌ಮೆಂಟ್ ಕಳಪೆ ದರ್ಜೆಯಾಗಿದ್ದು ಮಧ್ಯ ಭಾಗದಲ್ಲಿಯೇ ನೀರು ಹೋಗುತ್ತಿರುವುದು ನಿಜವಲ್ಲವೇ;